ಉಪಾಧ್ಯಕ್ಷರು.—ತಮ್ಮ ಸೂಚನೆಯನ್ನು ಗಮನಿಸಿದ್ದಾರೆ. ಅದಕ್ಕೆ ಕ್ರಮ ತೆಗೆದುಕೊಳ್ಳುತ್ತಾರಂತೆ.

Asphalting of road from Uliyaragoli to Malpe port.

348. SRI. VASANTHA V. SALIAN (Kaup).—Will the Minister for Public Works be pleased to tSate.

a) Is it not a fact that the road from Uliyaragoli village to Malpe Harbour passing through Western Ghat, was taken over to PWD some years back?

b) Has it come to the notice of the Government that this is a fisheries road and vehicles are moving on this road.

c) If so, why Govt. have not taken any action to provide Black topping to this road?

d) Whether the Govt. would take action atleast now, in providing B.T. to this road, so that it would be beneficial to the fishermen and other people?

SRI H. D. DEVEGOWDA (Minister for Public Works and Irrigation).—

a) The road has been formed under I.C. RC. Programme and is being maintained by PWD.

b) Yes.

c) The first Km. of this road has been asphalted at an estimated cost of Rs. 75,000 during the current year.

d) Providing B.T. to the remaining length of the road will be considered for being taken up in a phased manner, depending upon the availabilty of funds.

ಶ್ರೀ ವಸಂತ ವಿ. ಸಾಲ್ಯಾನ.—ಮಾನ್ಯ ಉಪಾಧ್ಯಕ್ಷರೇ, ಉಳಿಯಾರಗೋಳಿಹಳ್ಳಿಯಿಂದ ಮಲ್ಪೆ ಬಂದರಿಗೆ ಹೋಗುವ ರಸ್ತೆಯೂ ಮೀನುಗಾರಿಕೆ ರಸ್ತೆ ಆಗಿರುವುದರಿಂದ ಮತ್ತು ಇದು ಕರಾವಳಿ ರಸ್ತೆಯಾದುದರಿಂದ ಇದನ್ನು ಆದಷ್ಟು ಬೇಗ ಡಾಂಬರು ರಸ್ತೆಯಾಗಿ ಮಾಡಬೇಕೆಂದು ನಾನು ಮಾನ್ಯ ಮಂತ್ರಿಗಳನ್ನು ಒತ್ತಾಯಿಸುತ್ತಿದ್ದೇನೆ. ಆದೇ ರೀತಿಯಲ್ಲಿ ಇದರ ದುರಸ್ತಿಗೆ ಒಂದು ಕಡೆಯಲ್ಲಿ ಲಕ್ಷಾಂತರ ರೂಪಾಯಿಗಳನ್ನು ವಿಚ್ರ್ ಮಾಡುತ್ತಿದ್ದು, ಇನ್ನೊಂದು ಕಡೆಯಲ್ಲಿ ಸಮುದ್ರದ ಕೊರೆತದಿಂದ ಈ ರಸ್ತೆ ಕೊಚ್ಚಿಕೊಂಡು ಹೋಗುತ್ತಿದೆ. ಆದುದರಿಂದ ಈ ರಸ್ತೆಗೆ ಶಾಶ್ವತವಾದ ಒಂದು ದಂಡೆಯನ್ನು ನಿರ್ಮಿಸಲಿಕ್ಕೆ ನಾನು ಮಂತ್ರಿಗಳನ್ನು ಕೇಳುತ್ತೇನೆ,

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ಇದನ್ನು ಮಾಡಿದರೂ ಪ್ರಯೋಜನ ಆಗುವುದಿಲ್ಲ. ಇದು ಕೋಸ್ಟಲ್ ಲೈನ್‌ನಲ್ಲಿ ಇರತಕ್ಕ ರಸ್ತೆ ಇದ್ದು, ಇದಕ್ಕೆ ಸೀ ಪ್ರೊಟೆಕ್ಷನ್ ವಾಲ್ ಕಟ್ಟಬೇಕು. ಇದು ನಮ್ಮ ಫಿಷರ್‌ಮೆನ್ ಕಮ್ಯುನಿಟಿಗೆ ಉಪಯೋಗ ಆಗಲಿ ಎಂದು ಮಾಡಿದಂಥ ರಸ್ತೆಯಾಗಿದೆ. ಆದುದರಿಂದ ಸೀ ಪ್ರೊಟೆಕ್ಷನ್ ವಾಲ್ ಕಟ್ಟದೇ ಡಾಂಬರು ಹಾಕಿದರೆ ಉಪಯೋಗ ಆಗುವುದಿಲ್ಲ. ಸೀ ಪ್ರೊಟೆಕ್ಷನ್ ವಾಲ್ ಹಾಕುವುದಕ್ಕೆ ಒಂದು ಮಾಸ್ಟರ್ ಪ್ಲಾನ್ ತಯಾರು ಮಾಡಿ ಕೇಂದ್ರಕ್ಕೆ ಕಳುಹಿಸಿ ಕೊಟ್ಟಿದ್ದೇವೆ. ಅದು ಅವರ ಪರಿಶೀಲನೆಯ ಹಂತದಲ್ಲಿದೆ.

ಶ್ರೀ ವಸಂತ ವಿ. ಸಾಲ್ಯಾನ.—ಮಾನ್ಯ ಉಪಾಧ್ಯಕ್ಷರೇ. ಸುಮಾರು ಪೆಚ್ಚಿದಿಂದ ಈ ರಸ್ತೆ ಆಗಿದ್ದು, ಆದಾದನಂತರ ಸಮುದ್ರದ ಕೊರೆತದಿಂದ ಈ ರಸ್ತೆ ಕೊಚ್ಚಿಕೊಂಡು ಹೋಯಿತು. ಪುನ: ಅದಕ್ಕೆ ಖರ್ಚು ಮಾಡುತ್ತಿದ್ದಾರೆ. ಯಾವ ರೀತಿ ರಸ್ತೆಯ ಡೆವಲಪ್‌ಮೆಂಟ್‌ಗೆ ಖರ್ಚು ಮಾಡುತ್ತಿದ್ದಾರೋ ಅದೇ ರೀತಿಯಲ್ಲಿ ಶಾಶ್ವತವಾದ ದಂಡೆಯನ್ನು ನಿರ್ಮಾಣ ಮಾಡದಿದ್ದರೆ ಹಣ ಪೋಲಾಗುತ್ತದೆ.

ಉಪಾಧ್ಯಕ್ಷರು.—ಮಾಸ್ಟರ್ ಪ್ಲಾನ್ ಮಾಡಿದ್ದೇವೆ, ಅದು ಅಪ್ರೂವ್ ಆಗಬೇಕೆಂದು ಹೇಳುತ್ತಿದ್ದಾರೆ.

ಶ್ರೀ ವಸಂತ ವಿ. ಸಾಲ್ಯಾನ.—ಕಳೆದ ಬಾರಿಯೂ ಹೀಗೇ ಆಯಿತು, ರಸ್ತೆ ರಿಪೇರಿಗೆ ಸಾವಿರಾರು ರೂಪಾಯಿ ಖರ್ಚು ಮಾಡಿದರು. ಸಮುದ್ರದ ಕೊರೆತದಿಂದ ರಸ್ತೆಯೆಲ್ಲಾ ಕೊಚ್ಚಿಕೊಂಡು ಹೋಯಿತು. ಇದಕಾರಣ ಇದೇ ರೀತಿಯಲ್ಲಿ ಖರ್ಚು ಮಾಡಿದರೆ ಏನೂ ಪ್ರಯೋಜನ ಆಗುವುದಿಲ್ಲ. ಇದಕ್ಕೆ ದಂಡೆಯನ್ನು ನಿರ್ಮಿಸಬೇಕು. ಆಮೇಲೆ ಡೆವಲಪ್‌ಮೆಂಟ್ಸ್ ಮಾಡಬಹುದು.

ಶ್ರೀ ಹೆಚ್. ಡಿ. ದೇವೇಗೌಡ.—ಅಧ್ಯಕ್ಷರೇ, ನಾವು ಮಾಡತಕ್ಕಂಥಾದ್ದೂ ಟೆಂಪೊರರಿ ಕೆಲಸ. ಇದಕ್ಕೆ ಸರಿಯಾದಂಥ ಉತ್ತರ ಪಾವು ಕೇಂದ್ರಕ್ಕೆ ಕಳುಹಿಸಿರತಕ್ಕಂಥ ಮಾಸ್ಟರ್ ಪ್ಲಾನ್ ವಂಜೂರಾಗಿ, ಅದಕ್ಕೆ ಕೇಂದ್ರ ಸರಕಾರ ಹಣವನ್ನು ಒದಗಿಸಿದರೆ ಮಾತ್ರ, ಸರಿಯಾದಂಥ ಪರ್ಮನೆಂಟ್ ಕೆಲಸ ಮಾಡುವುದಕ್ಕೆ ಆಗುತ್ತದೆ, ಕೆಲಸ ಮಾಡುತ್ತಾರೆ, ಎರೋಷನ್ ಆಗುತ್ತದೆ, ಕೊಚ್ಚಿಕೊಂಡು ಹೋಗುತ್ತದೆ, ನಿಜ. ತಾವು ಅಸತ್ಯ ಏನೂ ಹೇಳಲಿಲ್ಲ, ತಾವು ಹೇಳಿದ್ದೆಲ್ಲಾ ನಿಜ. ಆದರೆ ಪ್ರೊಟೆಕ್ಟೀವ್ ವರ್ಕ್ಸ್ ನಾವು ಮಾಡುತ್ತಿದ್ದೇವೆ. It is not a permanent arrangement unless we take up that masterplan and complete all the sea erosion business.

ರಾಜ್ಯದಲ್ಲಿ ಕಾಫಿ ಬೆಳೆಗಾರರಿಂದ ಒತ್ತುವರಿ ಮಾಡಲ್ಪಟ್ಟ ಪ್ರದೇಶ

೫೮೨. ಶ್ರೀ ಕೆ.ಎಚ್. ಶ್ರೀನಿವಾಸ್ (ಶಿವಮೊಗ್ಗ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ರಾಜ್ಯದಲ್ಲಿ ಕಾಫಿ ಬೆಳೆಗಾರರು ಅತಿಕ್ರಮಿಸಿದ ಒಟ್ಟು ಅರಣ್ಯ ಭೂಮಿ.

(ಆ) ಸದ್ರಿ ಭೂಮಿಯಲ್ಲಿ ಅತಿ ಕ್ರಮಿಸಿದ ಬೆಳೆಗಾರರ ಸಂಖ್ಯೆ

(ಇ) ಮೇಲೆ ಹೇಳಿದ ಕಾಫಿ ಬೆಳೆಗಾರರು ಅತಿಕ್ರಮಿಸಿದ ಜಾಗಗಳ ಕನಿಷ್ಠ ಮತ್ತು ಗರಿಷ್ಠ ವಿಸ್ತೀರ್ಣ.

(ಈ) ಸರಕಾರವು ಈ ಎಲ್ಲಾ ಅತಿ ಕ್ರಮಣಗಳನ್ನು ಸಕ್ರಾಸಗಟಾಗಿ ಸಕ್ರಮಗೊಳಿಸಲು ತೀರ್ಮಾನಿಸಿದೆಯೇ ? ಮತ್ತು ಸಕ್ರಯಗೊಳಿಸಲು ವಿಧಿಸಿರುವ ಷರತ್ತುಗಳು.

(ಉ) ಈ ರೀತಿ ತೀರ್ಮಾನ ತೆಗೆಯಲು ಕಾರಣ ?

ಶ್ರೀ ಬಿ.ಎ. ಜೀವಿಜಯ (ಅರಣ್ಯ ರಾಜ್ಯ ಮಂತ್ರಿಗಳು).—

(ಅ) ೩೦೬.೨೪ ಹೆಕ್ಟೇರ್.

(ಆ) ೧೫೯

(ಇ) ಕನಿಷ್ಠ ೦.೧೦ ಹೆಕ್ಟೇರ್
ಗರಿಷ್ಠ ೮೨.೦೦ ಹೆಕ್ಟೇರ್.

(ಈ) ಇಲ್ಲ. ೨೭-೪-೧೯೭೮ರ ಹಿಂದೆ ಒತ್ತುವರಿಯಾದ ಪ್ರಕರಣಗಳನ್ನು ಕೆಲವು ಷರತ್ತುಗಳೊಂದಿಗೆ ಸಕ್ರಮಗೊಳಿಸಲು ಸರಕಾರವು ತೀರ್ಮಾನಿಸಿತ್ತು.

(ಉ) ಉದ್ಭವಿಸುವುದಿಲ್ಲ.